ಇನ್ನು ತಾವು ಜರಿಗೆ ಕಿರುಕುಳವಾಗುತ್ತಿರುವ ಬಗ್ಗೆ ತಿಳಿಸಿದ್ದೀರಿ. ಅಲ್ಲಿಗೆ ಬರುವ ಜನರು ಆ ರೀತಿ ಮಾಡಿದ್ದಾರೆ. ಆದರೂ ಸಹ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:** ಇದು ಮುಖ್ಯಮಂತ್ರಿಗಳ ಕ್ಷೇತ್ರವಾದ ಮದ್ದೂರಿನ ವಿಷಯ. ಇದರ ಬಗ್ಗೆ ಮಾನ್ಯ ಮಂತ್ರಿಗಳಿಗೂ ಗೊತ್ತಿದೆ. ಹಳೆಯ ರಸ್ತೆ ಏನೇನೆ ಅದು ಚೆನ್ನಾಗಿದೆ. ಆದರೆ, ಟೋಲ್ ಕಲೆಕ್ಷನ್ ಮಾಡುವ ಒಂದೇ ಉದ್ದೇಶಕ್ಕಾಗಿ ಹಳೆಯ ರಸ್ತೆಯನ್ನು ಬಂದ್ ಮಾಡಿದ್ದಾರೆ. ಆ ಬ್ರಿಡ್ಜ್ ಸಹ ಚೆನ್ನಾಗಿದೆ. ಆದುದರಿಂದ, ಹಳೆಯ ರಸ್ತೆಯನ್ನು, ಓಪನ್ ಮಾಡಿಸಿ, ಜನರಿಗೆ ಓಡಾಡಲು ಅನುಕೂಲ ಮಾಡಿಕೊಡಿ. ಟೋಲ್ ಕಲೆಕ್ಷನ್ ಮಾಡುವವರಿಗೆ ಅನುಕೂಲ ಮಾಡಲು ಪ್ರಯಾಣಿಕರಿಗೆ ತೊಂದರೆ ಮಾಡುವುದು ಸರ್ಕಾರದ ನೀತಿಯಾಗಬಾರದು. ಅದರ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳುತ್ತೀರಿ? ಅಲ್ಲಿ ಮದ್ದೂರು ವಡೆ ತೆಗೆದುಕೊಳ್ಳದಿದ್ದರೆ, ಆ ಹುಡುಗರು ಕಾರನ್ನು ಗೀಚುತ್ತಾರೆ.

**ಅಧ್ಯಕ್ಷರು:** ಇದು ಮದ್ದೂರು ಬ್ರಿಡ್ಜ್ ವಿಷಯ. ಮದ್ದೂರು ವಡೆಗೂ, ಅದಕ್ಕೂ ಸಂಬಂಧವಿಲ್ಲ.

**ಶ್ರೀ ಸಿ.ಆರ್. ಸಗೀರ್ ಅಹಮದ್:** ಇವರಿಗೆ ಅಷ್ಟು ಅನಾನುಕೂಲವಾಗುವುದಾದರೆ, ಮದ್ದೂರು ವಡೆ ತಿನ್ನಲು ಆ ಜಾಗಕ್ಕೇಕೆ ಹೋಗಬೇಕು?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:** ಅವರು ಮದ್ದೂರು ವಡೆ ತಿನ್ನಿಸುತ್ತಾರೆ. ನಮ್ಮ ಪರಿಸ್ಥಿತಿ ನೋಡಿ. ಟೋಲ್ ಕಲೆಕ್ಷನ್ ಮಾಡುವವರ ಪರವಾಗಿ ಸರ್ಕಾರ ಕಣ್ಣುಮುಚ್ಚಿ ಕುಳಿತಿದೆ.

**ಶ್ರೀ ಧರ್ಮಸಿಂಗ್:** ಇದಕ್ಕೆ ಖರ್ಚಾದದ್ದು ಒಂದು ಕೋಟಿ ಐವತ್ತು ಲಕ್ಷ ರೂಪಾಯಿಗಳು. ಬಾರ್ಡರ್ ಎಕನಾಮಿಕ್ ಇಂಪಾರ್ಟೆನ್ಸ್ ಅಡಿಯಲ್ಲಿ ಈ ಸೇತುವೆ ಕೆಲಸ ತೆಗೆದುಕೊಂಡಿದ್ದೇವೆ. ಇಂದು ಬಿ.ಓ.ಟಿ. ಮೇಲೆ ಯಾವುದಾದರೂ ಸೇತುವೆಯನ್ನು ಗುತ್ತಿಗೆ ಆಧಾರದ ಮೇಲೆ ಕೊಟ್ಟರೆ, ಅಲ್ಲಿಯೇ ಮತ್ತೊಂದು ರಸ್ತೆಯ ಮೇಲೆ ಓಡಾಡಲು ಅನುಕೂಲ ಮಾಡಿದರೆ ಯಾರೂ ಸಹ ಬಿ.ಓ.ಟಿ. ಮೇಲೆ ಕೆಲಸ ಮಾಡಲು ಬರುವುದಿಲ್ಲ. ಹುಬ್ಬಳ್ಳಿ ಬೈಪಾಸ್ ರಸ್ತೆಯನ್ನು ನಾವೇನು ಬಿ.ಓ.ಟಿ ಆಧಾರದ ಮೇಲೆ ಮಾಡಿದ್ದೇವೆ, ಅಲ್ಲಿ ಅವರು ನಾವು ಹಳೆಯ ರಸ್ತೆಯ ಮೇಲೆ ಓಡಾಡುತ್ತೇವೆ ಎಂದು ಕೆಲಸ ನಿಲ್ಲಿಸಿದ್ದಾರೆ. ಬೇರೆ ರಸ್ತೆ ಬಂದ್ ಮಾಡದಿದ್ದರೆ ಅವರಿಗೆ ಟೋಲ್ ಕಲೆಕ್ಷನ್ ಆಗುವುದಿಲ್ಲ. ಇಂದು ಯಾರ್ಯಾರು ಬಿ.ಓ.ಟಿ. ಬೇಸಿನ್ ಮೇಲೆ ಕೆಲಸ ಮಾಡುತ್ತಾರೆ, ಅವರಿಗೆ ಸರ್ಕಾರ ಹಣ ಕೊಡಬೇಕಾಗುತ್ತದೆ. ಟೆಂಡರ್ ಕಾಲ್‌ಫರ್ ಮಾಡಿ ಅದನ್ನು ಕೊಟ್ಟಿದ್ದು, ಅದರಲ್ಲೇನೂ ಅಪಾರಾತಪರಾ ಇಲ್ಲ. ಹಳೆಯ ರಸ್ತೆಯನ್ನು ಎರಡು ತಿಂಗಳ ನಂತರ ಪ್ರಾರಂಭಿಸುತ್ತೇವೆ. ಅಷ್ಟರಲ್ಲಿ ಟೋಲ್ ಕಲೆಕ್ಷನ್ ಮುಗಿಯುತ್ತದೆ. ಆನಂತರ, ಜನರು ಬ್ರಿಡ್ಜ್ ಮೇಲೂ ಸಹ ಓಡಾಡಬಹುದು.

## ಉತ್ತರ ಕನ್ನಡ ಜಿಲ್ಲೆಯಲ್ಲಿ ಗಣಿಕೈಗಾರಿಕೆ

**45 (505) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ):** ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಗಣಿಗಾರಿಕೆ ಎಲ್ಲೆಲ್ಲಿ ನಡೆಯುತ್ತಿದೆ; ಅವುಗಳು ಯಾವುವು; (ವಿವರ ನೀಡುವುದು)

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ಗಣಿಗಾರಿಕೆ ಎಲ್ಲೆಲ್ಲಿ ನಡೆಯುತ್ತಿದೆ; ಅವುಗಳು ಯಾವುವು; (ವಿವರ ನೀಡುವುದು)

ಇ) ಯಲ್ಲಾಪುರ ತಾಲ್ಲೂಕಿನ ಬಿಸಗೋಡದಲ್ಲಿ ಗಣಿಗಾರಿಕೆಯು ಯಾವ ಸ್ಥಿತಿಯಲ್ಲಿದೆ;

ಈ) ಗಣಿಗಾರಿಕೆ ಬಗ್ಗೆ ಸರ್ಕಾರದ ಮಾರ್ಗ ಸೂಚಿಯೇನು? (ವಿವರ ನೀಡುವುದು).

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು):

ಅ) ರಾಜ್ಯದಲ್ಲಿ ಒಟ್ಟು 463 ಗಣಿ ಗುತ್ತಿಗೆಗಳು ಚಾಲ್ತಿಯಲ್ಲಿರುತ್ತವೆ. ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ 39 ಸ್ಥಳಗಳಲ್ಲಿ ಗಣಿಗಾರಿಕೆ ಮಂಜೂರಾಗಿದ್ದು, ಇದರಲ್ಲಿ 23 ಗಣಿ ಗುತ್ತಿಗೆಗಳು ಕಾರ್ಯಗತವಾಗಿರುತ್ತವೆ. ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.

ಇ) ಯಲ್ಲಾಪುರ ತಾಲ್ಲೂಕಿನ ಬಿಸಗೋಡಿನಲ್ಲಿ ಮ್ಯಾಂಗನೀಸ್ ಅದಿರಿಗೆ ಗಣಿ ಗುತ್ತಿಗೆ: 886 ದಿನಾಂಕ: 15-05-69 ರಿಂದ 20 ವರ್ಷಗಳ ಅವಧಿಗೆ ಮೈಸೂರು ಮಿನರಲ್ಸ್ ಲಿಮಿಟೆಡ್, ರಾಜ್ಯ ಸರ್ಕಾರದ ಉದ್ಯಮಕ್ಕೆ ನೀಡಲಾಗಿದ್ದು, ಅದರ ಅವಧಿ 14-05-89 ಕ್ಕೆ ಮುಗಿದಿದ್ದು ನವೀಕರಣಗೊಂಡಿಲ್ಲ. ಭಾರತದ ಸರ್ವೋಚ್ಚ ನ್ಯಾಯಾಲಯವು ದಾವೆ ಸಂಖ್ಯೆ: 202-95 ಹಾಗೂ 171:96 ದಿನಾಂಕ:12-12-96 ರಲ್ಲಿ ನೀಡಿದ ತೀರ್ಪು ಹಾಗೂ ಅರಣ್ಯ ಸಂರಕ್ಷಣಾ ಕಾಯ್ದೆ, 1980 ಮತ್ತು ಗಣಿ ಮತ್ತು ಭೂ ವಿಜ್ಞಾನ ನಿರ್ದೇಶನಾಲಯದ ದಿನಾಂಕ: 25-1-97ರ ಪತ್ರದ ಪ್ರಕಾರ ಗಣಿಗಾರಿಕೆಯು ಸ್ಥಗಿತಗೊಂಡಿದೆ.

ಈ) ಮುಖ್ಯ ಖನಿಜಗಳಿಗೆ ಭಾರತ ಸರ್ಕಾರದ ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1957 ಮತ್ತು ಅದರಡಿ ರಚಿತವಾಗಿರುವ ಖನಿಜ ರಿಯಾಯಿತಿ ನಿಯಮಾವಳಿ, 1960ರಲ್ಲಿನ ಅವಕಾಶ:ನಿಬಂಧನೆಗಳಿಗೆ ಒಳಪಟ್ಟಂತೆ ಗಣಿ ಗುತ್ತಿಗೆಯನ್ನು ನೀಡಲಾಗುತ್ತಿದೆ. ಗ್ರಾನೈಟ್ ಹಾಗೂ ಇತರೆ ಕಲ್ಲು ಗಣಿಗಳನ್ನು ರಾಜ್ಯ ಸರ್ಕಾರದ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿ, 1994 ಹಾಗೂ ಭಾರತ ಸರ್ಕಾರದ ಗ್ರಾನೈಟ್ ಸಂರಕ್ಷಣೆ ಮತ್ತು ಅಭಿವೃದ್ಧಿ ನಿಯಮಾವಳಿ, 1999 (Granite Conservation and Development Rules, 1999) ರಲ್ಲಿ ಅವಕಾಶ: ನಿಬಂಧನೆಗಳಿಗೆ ಒಳಪಟ್ಟಂತೆ ಗಣಿ ಗುತ್ತಿಗೆಯನ್ನು ನೀಡಲಾಗುತ್ತಿದೆ.

ರಾಜ್ಯದಲ್ಲಿ ಗಣಿ ಕಾರ್ಯ ಮಾಡುತ್ತಿರುವ ಸ್ಥಳಗಳ ಜಿಲ್ಲಾವಾರು ಮಾಹಿತಿ

ಅನುಬಂಧ-1

ವಿಧಾನ ಸಭೆಯ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 505 ರ ಪ್ರಶ್ನೆಗಳ ಉತ್ತರಕ್ಕೆ ಮಾಹಿತಿ

| ಸಂಖ್ಯೆ | ಜಿಲ್ಲೆಗಳು | ಖನಿಜ | ಗುತ್ತಿಗೆಗಳ ಸಂಖ್ಯೆ | ಮಂಜೂರಾತಿ ನೀಡಿರುವ ಸ್ಥಳಗಳು |
|---|---|---|---|---|
| 1 | 2 | 3 | 4 | 5 |
| 1. | ಗುಲ್ಬರ್ಗಾ | ಮೌಲ್ಡಿಂಗ್‌ಸ್ಯಾಂಡ್ | 09 | ನಂದೆಪಲ್ಲಿ, ತೊಣವಾರ ಶೆಟ್ಟಿಹಳ್ಳಿ, ಯಲ್ಲೇರಿ |
| | | ಕ್ವಾರ್ಟ್ಸ್ | 01 | ಹೊಸಕೆರೆ |
| | | ಗೋಲ್ಡ್ | 01 | ಮಂಗಳೂರು |
| | | ಲೈಂ ಸ್ಟೋನ್ | 09 | ಮಲಸೂರು, ಇಂಗಳಗಿ ಮಸಬೇಡ, ಇಂಚಿಪಲ್ಲಿ, ಸೇಡಂ |
| | | ಒಟ್ಟು | 20 | |
| 2. | ಬೀದರ್ | ಚೈನಾಕ್ಲೇ | 02 | ಕಾಮತಾಣ |
| | | ರೆಡ್ ಓಕರ್ | 01 | ಸಿರ್ಸಿ |
| | | ಒಟ್ಟು | 03 | |
| 3. | ಬೆಳಗಾಂ | ಬಾಕ್ಸೈಟ್ | 07 | ದಾಮನೆ, ಹಂಗ್ರಿಗೆ, ಬಲಸನಾರಿ, ಕಿರವಾಲೆ, ಕಲ್ಮನೆ, ಅಮಟೆ |
| | | ಫೆಲ್ಸ್‌ಫಾರ್ | 01 | ದೇಸೂರು |
| | | ವೈಟ್ ಕ್ಲೇ | 01 | ದೇಸೂರು |
| | | ಲೈಂ ಸ್ಟೋನ್ | 14 | ಯದವಾಡ, ಮಾನಾಮೆ, ಕಲಗೋಡು, ಅರಳಿಮಟ್ಟಿ, ಹಿರೇಕೊಪ್ಪ, ಕುನ್ನಾಲು, ಗುಟಗೋಲ್ |

| 1 | 2 | 3 | 4 | 5 |
|---|---|---|---|---|
| | | ಡಾಲಮೈಟ್ | 01 | ಯದವಾಡ |
| | | ಮೌಲ್ಡಿಂಗ್ ಸ್ಯಾಂಡ್ | 08 | ಮೇಲವನಿಡ್, ಉಡಗತ್ತಿ, ಕುಪ್ಪೋಳಿ, ಹಲಸಾಯಿ, ಅಕ್ರಾ, ಶಿಟವಿಂಡಿ, ಹಸಲ್ |
| | | ಕ್ಯಾಲ್ಸೈಟ್ | 01 | ಯಾದವಾಡ |
| | | ಕ್ವಾರ್ಟ್ಜೈಟ್ | 01 | ಬೆಟಗೇರಿ |
| | | ಮ್ಯಾಗನೀಸ್ | 03 | ಕೇಲಿ, ಗಂಡಿ, ಜಮ್ನಾಗಾಂವ್ |
| | | ಚೈನಾಕ್ಲೇ | 04 | ರಾಮಗುನಡಿ, ಕರಿಗೆ, ಗೊಲ್ಲಾನ್ |
| | | ಸಿಲಿಕಾ ಸ್ಯಾಂಡ್ | 01 | ಹೆಚ್. ತೋರ್ಗಲ್ |
| | | ಒಟ್ಟು | 42 | |
| 4. | ಬಾಗಲಕೋಟೆ | ಲೈಂ ಸ್ಟೋನ್ | 37 | ಕೆಡಪತ್ತಿ, ಹನುಮನೇರಿ, ಸೀರಬೂದಿನಾಳ, ವೀರಾಪುರ, ಶೆಲ್ಲಿಕೇರಿ, ಕಳಸಕೊಪ್ಪ, ಬಾಗ್ವೇರಿ, ಅಂಕಲಗಿ |
| | | ಡಾಲಮೈಟ್ | 02 | ಕಟಗೇರಿ, ನೀರಲಕೇರಿ |
| | | ಕ್ವಾರ್ಟ್ಜ್ | 01 | ಕಾಗಲಗುಂಬ |
| | | ಐರನ್ ಓರ್ | 02 | ಹಿರೇಮಾಗಿ, ಐಹೊಳೆ |
| | | ಒಟ್ಟು | 42 | |
| 5. | ಧಾರವಾಡ | ಮೌಲ್ಡಿಂಗ್ ಸ್ಯಾಂಡ್ | 20 | ಹಾರನಗಿರಿ, ಮಂಗನೂರು ಕೋಟಿನಾಳ, ಐರಣಿ, ನಿಲವಾಗಿಲು, ಮೆಡ್ಲೇರಿ, ಆಡೂರು, ಕೆ. ಹೊಸಕೋಟೆ. |

| 1 | 2 | 3 | 4 | 5 |
|---|---|---|---|---|
| | | ಐರನ್ ಓರ್ | 01 | ಡೋಣಿ |
| | | ಕ್ಲೇ | 01 | ಅಡೂರು |
| | | ಒಟ್ಟು | 22 | |
| 6. | ಹಾಸನ | ಕ್ರೋಮೈಟ್ | 06 | ಆಲದಹಳ್ಳಿ, ಬೈರಾಪುರ, ತಗಡೂರು, ಹುಲ್ಲೇನಹಳ್ಳಿ, |
| | | ಕಯೋಲಿನ್ | 02 | ಮಹದೇವನಹಳ್ಳಿ, ಮಂಚೇನಹಳ್ಳಿ |
| | | ವರ್ಮಿಕ್ಯುಲೇಟ್ | 01 | ಮಲವನಘಟ್ಟ |
| | | ಸೋಪ್‌ಸ್ಟೋನ್ | 01 | ಜಡಗಟ್ಟ |
| | | ಕ್ವಾರ್ಟ್ಜ್ | 03 | ರಂಗಾಪುರ, ದುತ್ತನಗರೆ, ಹುಲ್ಲಿನಹಳ್ಳಿ |
| | | ಒಟ್ಟು | 13 | |
| 7. | ಚಿಕ್ಕಮಗಳೂರು | ಐರನ್ ಓರ್ | 02 | ಮಲ್ಲೇಶ್ವರ, ಕೆಮ್ಮಣ್ಣುಗುಂಡಿ, |
| | | ಗ್ರೀನ್ ಕ್ವಾರ್ಟ್ಜ್ | 03 | ಈಶ್ವರಹಳ್ಳಿ, ಯರೇಹಳ್ಳಿ, ಬಿಂಡಿಗ |
| | | ಒಟ್ಟು | 05 | |
| 8. | ದಕ್ಷಿಣ ಕನ್ನಡ | ಲೈಂ ಶೆಲ್ | 06 | ಕುಂದಾಪುರ, ಗಂಗೊಳ್ಳಿ, ತೊಕ್ಕೆ, ಹಮ್ಮಾಡಿ |
| | | ಸಿಲಿಕಾ ಸ್ಯಾಂಡ್ | 14 | ತೆಕ್ಕೊಟ್ಟಿ, ಕೋಟೇಶ್ವರ, ಕೋಡಿ, ಕೊಪ್ಪಾಡು, ಪಾರಂಪಳ್ಳಿ |
| | | ಒಟ್ಟು | 20 | |
| 9. | ಶಿವಮೊಗ್ಗ | ಲೈಂ ಸ್ಟೋನ್ | 01 | ಬಂಡೀಗುಡ್ಡ |
| | | ವೈಟ್ ಕ್ವಾರ್ಟ್ಜ್ | 02 | ಬಿಳಿಕಲ್‌ಬೆಟ್ಟ, ಕೆಂಗಟ್ಟಿ |

| 1 | 2 | 3 | 4 | 5 |
|---|---|---|---|---|
| | | ಗ್ರೀನ್ ಕ್ವಾರ್ಟ್ಜ್ | 02 | ಮಾವಿನಕಟ್ಟೆ, ಹೊಸ್ಕಬಾಗಿ |
| | | ಕಯನೈಟ್ | 01 | ಯಡೂರು |
| | | ಕಯೋಲಿನ್/ಚೈನಕ್ಲೇ | 02 | ದೇವಂಗಿ, ನಾಗವಲ್ಲಿ |
| | | ಮ್ಯಾಂಗನೀಸ್ | 01 | ಕೊರಕೊಡ್ಲು |
| | | ಒಟ್ಟು | 09 | |
| 10. | ಕೋಲಾರ | ಗೋಲ್ಡ್/ಸಿಲ್ವರ್ | 01 | ಕೆ.ಜಿ.ಎಫ್ |
| | | ಫೈರ್ ಕ್ಲೇ | 03 | ಪುಲಿಗಮಾರನಹಳ್ಳಿ, ಬೈರಗನಹಳ್ಳಿ, ಪಲಚಾಲು |
| | | ಕ್ವಾರ್ಟ್ಜ್ | 03 | ಕೆ.ವಿ. ಪಲ್ಲಿ, ಬೈರನಹಳ್ಳಿ, ಮಾರನಹಳ್ಳಿ |
| | | ಒಟ್ಟು | 07 | |
| 11. | ಉತ್ತರ ಕನ್ನಡ | ಮ್ಯಾಂಗನೀಸ್ | 08 | ಬಿಸಗೋಡು, ತರ್ಕಬೈಲ್, ಕೂಡ್ಲಿ, ಡಿಗ್ಗಿ, ಎ. ಮೊಹಿರಾ |
| | | ಐರನ್ ಓರ್ | 01 | ಅನಮೋಡು |
| | | ಕ್ವಾರ್ಟ್ಜ್ | 01 | ಕಾಗೇರಿ |
| | | ಲೈಂ ಶೆಲ್ | 18 | ಪಳದಿಪುರ, ಹೊನ್ನಾವರ, ಪೊಸಟ್ಟಿ, ಕೊಡಕಣಿ, ಕೆ. ಕುರ್ವೆ, ಸಿ. ಕುಳ್ಳ ಪಹಾಗೂ ಇತರೆ |
| | | ಸಿಲಿಕಾ ಸ್ಯಾಂಡ್ | 11 | ಕಾಸರಕೋಡ್, ಪಳದಿಪುರ, ಬೊಂಗ್ರೆ, ದೇವನಗಿರಿ, ಕಾಲಬಾಗ್, ಮಜೇಲಿ |
| | | ಒಟ್ಟು | 39 | |
| 12 | ಮೈಸೂರು | ಫೆಲ್ಸ್ಪಟ್ | 04 | ಸಾದನಹಳ್ಳಿ, ನಾಗೇನಹಳ್ಳಿ |

| 1 | 2 | 3 | 4 | 5 |
|---|---|---|---|---|
| | | ಮ್ಯಾಗ್ನಸೈಟ್ | 04 | ಡೊದ್ದಕನ್ಯಾ, ಹುಲ್ಲಹಳ್ಳಿ, ಕಾರ್ಯ, ಅಲ್ಲನಪುರ |
| | | ಡುನೈಟ್ | 01 | ದೊಡ್ಡಕನ್ಯಾ |
| | | ಡಾಲಮೈಟ್ | 02 | ಬೆಟ್ಟದಬೀಡು |
| | | ಕಯನೈಟ್ | 03 | ಕರಿಗಾಲ, ತೊರವಳ್ಳಿ, ಬೆಟ್ಟಹಳ್ಳಿ |
| | | ಸೋಪ್‌ಸ್ಟೋನ್ | 01 | ಕೊಹಲ್ಲ |
| | | ಗ್ರಾಫೈಟ್ | 02 | ತೊರವಳ್ಳಿ, ಪುವದಕಟ್ಟೆ |
| | | ಒಟ್ಟು | 17 | |
| 13. | ಕೊಡಗು | ಕೊರಂಡಂ | 01 | ಬೆಳಗಿರಿ |
| | | ಒಟ್ಟು | 01 | |
| 14. | ತುಮಕೂರು | ಐರನ್ ಓರ್ | 15 | ರಜತಾದ್ರಿಪುರ, ಕಾರೆಕುರ್ಚಿ |
| | | ಮ್ಯಾಂಗನೀಸ್ | 10 | ಗೊಲ್ಲರಹಳ್ಳಿ, ಸೊಂಡೇನಹಳ್ಳಿ, ಕೊಂಡ್ಲಿ, ಕಾರೇಹಳ್ಳಿ |
| | | ಕ್ವಾರ್ಟ್ಜ್ | 07 | ಮತಿಗಟ್ಟ, ಕೊರಗೆರೆ, ಸೀಗೇಬಾಗಿ, ವೀರಾಪುರ, ಕೊಂಡ್ಲಿ, ಹರಲಕಟ್ಟಿ, ಉಪ್ಪನಹಳ್ಳಿ |
| | | ಕ್ಲೇ | 06 | ಸೊಂಡೇನಹಳ್ಳಿ, ಕೊಂಡ್ಲಿ |
| | | ಲೈಂಸ್ಟೋನ್ | 11 | ಲಕ್ಕೇನಹಳ್ಳಿ, ಯರೇಕಟ್ಟೆ, ಸೋಮನಹಳ್ಳಿ, ಸಾದರಹಳ್ಳಿ, ಗೊಲ್ಲರಹಳ್ಳಿ ಮಾವಿನಹಳ್ಳಿ, ಕೊಂಡ್ಲಿ |
| | | ಸೋಪ್‌ಸ್ಟೋನ್ | 02 | ಗೊಲ್ಲರಹಳ್ಳಿ, ಹೊಸಳ್ಳಿ |

| 1 | 2 | 3 | 4 | 5 |
|---|---|---|---|---|
| | | ಡಾಲಮೈಟ್ | 06 | ಸೋಮನಹಳ್ಳಿ, ಅಗ್ರಹಾರ ಸಾದರಹಳ್ಳಿ, ಲಕ್ಕೇನಹಳ್ಳಿ |
| | | ಗೋಲ್ಡ್ | 01 | ಗುಂಗುರಪೇಟೆ |
| | | ಒಟ್ಟು | 58 | |
| 15. | ಮಂಡ್ಯ | ಕ್ವಾರ್ಟ್ಜ್ | 02 | ಹುಲಿಕೆರೆ, ಮುದಿಗೆರೆ |
| | | ಮೌಲ್ಡಿಂಗ್ ಸ್ಯಾಂಡ್ | 01 | ತೊರೆಚಾಕನಹಳ್ಳಿ |
| | | ಫೆಲ್‌ಸ್ಪೆಟ್ | 01 | ಮೊಗ್ರಹಳ್ಳಿ |
| | | ಒಟ್ಟು | 04 | |
| 16. | ಬೆಂಗಳೂರು ಗ್ರಾಮೀಣ | ಕೊರಂಡಂ | 03 | ಹೊನ್ನಾಯಕನಹಳ್ಳಿ, ಕೊಲ್ಲೂರು |
| | | ಪೆಲ್‌ಸ್ಪಾರ್ | 03 | ಉಡೇರಹಳ್ಳಿ, ಬಸವತ್ತಿ ಜಿ.ಎನ್. ಹಳ್ಳಿ |
| | | ಕ್ವಾರ್ಟ್ಜ್ | 02 | ಅರುಡಿ ಮಾರನಹಳ್ಳಿ |
| | | ಚೈನಾಕ್ಲೇ | 01 | ಪಿ.ಎಂ. ಹಳ್ಳಿ, ಗೊಲ್ಲಟ್ಟಿ |
| | | ಫೈರ್‌ಕ್ಲೇ | 01 | ಸೋಲದೇವನಹಳ್ಳಿ |
| | | ಒಟ್ಟು | 10 | |
| 17. | ಬಳ್ಳಾರಿ | ಐರನ್‌ಓರ್ | 49 | ಬೆಲಗಾಲ್, ಜಾನೆಕುಂಟೆ ಹಲಕುನ್ನೆ, ಹರಗಿನದೇಸಿ, ದೋಣಿಮಲ್ಲೆ ದೇವಗಿರಿ, ಎಸ್.ಬಿ. ಹಳ್ಳಿ, ಸಿದ್ದಾಪುರ ವಿಠಲಾಪುರ, ತಾರಾನಗರ ೫. ಹಟ್ಟಿ, ನವಲಟ್ಟಿ, ಕಾರಿಗನೂರು, ಕಲ್ಲಹಳ್ಳಿ, ೫ಂಗಳಗಿ, ವ್ಯಾಸನಕೆರೆ, ಜೆ.ಎನ್. ಹಳ್ಳಿ, ಸುಂಕಲಾಪುರ, ಕಾಕುಬಾಳ ಕರಡಿಕೊಳ್ಳ, ಎನ್.೫.ಬಿ. |

| 1 | 2 | 3 | 4 | 5 |
|---|---|---|---|---|
| | | | | ರೇಂಜ್, ಜೈಗಿನಾಪುರಂ, ರಾಮಘಡ |
| | | ಕ್ವಾರ್ಟ್ಜ್ | 06 | ಹೆಚ್.ವಿ. ಹಳ್ಳಿ, ಮಲ್ಲಾಪುರ, ಹಾವಿನ ಮೊಡಗು, ಮಾತೇನಹಳ್ಳಿ |
| | | ಮ್ಯಾಂಗನೀಸ್ | 11 | ನಂದಿಹಳ್ಳಿ, R.M. ಬ್ಲಾಕ್ ನಾರಾಯಣಪುರ, ತೊಣ್ಣೆಗೆರೆ, ದೇವಗಿರಿ, ವೈ. ನಗರ. |
| | | ರೆಡ್ ಆಕ್ಸೈಡ್ | 08 | ಕಾಕುಬಾಳ, ಕೆ. ಕೊಳ್ಳ, ಉಬ್ಬಲಗುಂಡಿ, ಜಂಬುನಾಥ್, ಅಲಗಿಲಹೊಂಡ |
| | | ಮೌಲ್ಡಿಂಗ್ ಸ್ಯಾಂಡ್ | 08 | ಕುರುವತ್ತಿ, ಹೊಳಲು, ಹರವಿ, ಮೈಲಾರ |
| | | ಕೊರಂಡಂ | 01 | ಕಾಕುಪ್ಪ |
| | | ಒಟ್ಟು | 83 | |
| 18. | ರಾಯಚೂರು | ಗೋಲ್ಡ್/ಸಿಲ್ವರ್ | 03 | ಹಟ್ಟಿ, ಮಂಡಾಲಿ, ಊಟಿ |
| | | ಕ್ವಾರ್ಟ್ಜ್ | 01 | ರಾಂಪುರ |
| | | ಒಟ್ಟು | 04 | |
| 19. | ಕೊಪ್ಪಳ | ಕ್ವಾರ್ಟ್ಜ್ | 05 | ಕನಕಪುರ, ಬಸಾಪುರ, ಕಂಡ್ಲಿ, ಗೋರಿಪುರ |
| | | ಗ್ರೀನ್ ಕ್ವಾರ್ಟ್ಜ್ | 01 | ನಾಗುಡ್ಡ |
| | | ಒಟ್ಟು | 06 | |
| 20. | ಚಿತ್ರದುರ್ಗ | ಐರನ್ ಓರ್ | 08 | ಮೇಗಲಹಳ್ಳಿ, ಮಹದೇವನಹಳ್ಳಿ, ಬಿ.ಬಿ. ಹಳ್ಳಿ, ಕಡಲೆಗುಡ್ಡ, ಮಾತೇನಹಳ್ಳಿ |

| 1 | 2 | 3 | 4 | 5 |
|---|---|---|---|---|
| | | ಮ್ಯಾಂಗನೀಸ್ | 23 | ಭೀಮಸಮುದ್ರ, ಕೇಶವಪುರ, ಸಾದರಹಳ್ಳಿ, ಮಹದೇಪಪುರ, ಜೆ. ಹೊಸಳ್ಳಿ |
| | | ಲೈಂಮ್ಸ್ಟೋನ್ | 12 | ಇಟ್ಟಂಗೆಹಳ್ಳಿ, ಸಿ.ಬಿ. ಕೆರೆ, ಮನದಕೆರೆ, ಡಿ.ಬಿ. ಕೆರೆ, ನಾಗತಿಹಳ್ಳಿ, ಸಾದರಗಟ್ಟಿ, ಕಂಚಿಪುರ, ಲಕ್ಕೇನಹಳ್ಳಿ, ಸಿಂಗೇನಹಳ್ಳಿ, ಹುಲಿಗಟ್ಟೆ |
| | | ಕಾಪರ್ | 02 | ಇಂಗಳದಾಳ |
| | | ಮೌಲ್ಡಿಂಗ್ ಸ್ಯಾಂಡ್ | 09 | ಹಲಸಬಾಳು, ಸಾರಥಿ, ರಾಜನಹಳ್ಳಿ, ನಂದಗುಡಿ |
| | | ಗ್ರೀನ್ ಕ್ವಾರ್ಟ್ಜ್ | 03 | ಜೆ. ಹೊಸಳ್ಳಿ |
| | | ಸೋಪ್ ಸ್ಟೋನ್ | 01 | ಸಂಗೇನಹಳ್ಳಿ |
| | | ಒಟ್ಟು | 58 | |
| | ಒಟ್ಟು ರಾಜ್ಯದಲ್ಲಿರುವ ಗಣಿಗಳು | | 463 | |

ಅನುಬಂಧ – 2

**ಚುಕ್ಕೆ ಪ್ರಶ್ನೆ ಸಂಖ್ಯೆ 505 ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲಾ), ವಿಧಾನ ಸಭಾ ಸದಸ್ಯರು**

| ಕ್ರಮ ಸಂಖ್ಯೆ | ಗುತ್ತಿಗೆದಾರರ ಹೆಸರು | ಗುತ್ತಿಗೆ ಸಂಖ್ಯೆ | ಖನಿಜ | ಮಂಜೂರಾತಿ ದಿನಾಂಕ ಹಾಗೂ ಅವಧಿ | ಗ್ರಾಮ ಹಾಗೂ ವಿಸ್ತೀರ್ಣ (ಹೆಕ್ಟೇರ್) |
|---|---|---|---|---|---|
| 1 | 2 | 3 | 4 | 5 | 6 |
| | ಶ್ರೀ: ಮೆ: | | | ಹಳಿಯಾಳ ತಾಲ್ಲೂಕು | |
| 1. | ಎ.ಎಸ್.ಬಿ. ವರಾಣ | 1736 | ಕ್ವಾಡ್ಜ್ | 18-3-81 20 ವರ್ಷ | ಬಿಬ್ಬಲಗೇರಿ 0.85 ಹೆ. |

| 1 | 2 | 3 | 4 | 5 | 6 |
|---|---|---|---|---|---|
| | | | | ಹೊನ್ನಾವರ ತಾಲ್ಲೂಕು | |
| 2. | ಕೆ.ಎಸ್. ಮೋಹನ ಹೆಗಡೆ | 1781 | ಲೈಮ್‌ಶೆಲ್ | 11-9-81<br>20 ವರ್ಷ | ಹಳದಿಪುರ<br>61.00 ಎಕರೆ |
| 3. | ಬಿ. ನವೀನ್ ಮೆಂಡನ್ | 1738 | ಸಿಲಿಕಾ<br>ಉಸುರು | 19-3-91<br>20 ವರ್ಷ | ಕಾಸರಕೋಡ<br>54.63 ಹೆ |
| 4. | ಎನ್.ಐ. ಜ್ಯೋತಿ | 1978 | ಸಿಲಿಕಾ<br>ಉಸುರು | 11-6-83<br>20 ವರ್ಷ | ಕೆಳಗಿನೂರು<br>32.27 ಹೆ. |
| 5. | ಸಾಗರ ಮಿನರಲ್ಸ್ | 2095 | ಸಿಲಿಕಾ<br>ಉಸುರು | 20-10-83<br>10 ವರ್ಷ | ಹಳದೀಪುರ<br>7.20 ಎಕರೆ |
| 6. | ಕೆನರಾ ಮಿನರಲ್ಸ್<br>ಪಿ. ಲಿಮಿಟೆಡ್ | 2238 | ಸಿಲಿಕಾ<br>ಉಸುರು | 7-8-98<br>20 ವರ್ಷ | ಕಾಸರಕೋಡು<br>12.02 ಹೆ. |
| | | | | ಕುಮಟಾ ತಾಲ್ಲೂಕು | |
| 7. | ಪಿ.ಎಸ್. ಗಾವಂಕರ್ | 2219 | ಲೈಮ್‌ಶೆಲ್ | 7-1-92<br>20 ವರ್ಷ | ಅಘನಾಶಿನಿ<br>632 ಎಕರೆ |
| 8. | ಪಿ.ಎಸ್. ಗಾವಂಕರ್ | 2034 | ಲೈಮ್‌ಶೆಲ್ | 17-2-97<br>10 ವರ್ಷ | ಹೊಸಕಟ್ಟಾ<br>27.51 ಹೆ. |
| 9. | ಎಸ್.ಆರ್. ಶಾನಭಾಗ್ | 2223 | ಲೈಮ್‌ಶೆಲ್ | 22-7-94<br>20 ವರ್ಷ | ಕೊಡ್ಕಣಿ<br>5 ಹೆ. |
| 10. | ಎ.ಆರ್. ಪುರುಷನ್ | 2155 | ಸಿಲಿಕಾ<br>ಉಸುಕು | 10-1-92<br>10 ವರ್ಷ | ಹಂದಿಗೋಡ<br>4.45 ಹೆ. |
| 11. | ಬಿ. ನವೀನ್ ಮೆಂಡನ್ | 1739 | ಸಿಲಿಕಾ<br>ಉಸುಕು | 14-3-81<br>20 ವರ್ಷ | ದೇವಗಿರಿ<br>23.19 ಹೆ |
| 12. | ಬಿ. ನವೀನ್ ಮೆಂಡನ್ | 1877 | ಸಿಲಿಕಾ<br>ಉಸುಕು | 8-3-83<br>20 ವರ್ಷ | ಹೊಲನಗದ್ದೆ<br>20.73 ಹೆ. |
| 13. | ಬಿ. ನವೀನ್ ಮೆಂಡನ್ | 2213 | ಸಿಲಿಕಾ<br>ಉಸುಕು | 17-4-96<br>20 ವರ್ಷ | ಬಾವಿಕೊಡ್ಲ<br>40.47 ಹೆ. |

| 1 | 2 | 3 | 4 | 5 | 6 |
|---|---|---|---|---|---|
| 14. | ಆರ್.ವಿ. ಹೆಗಡೆ | 2221 | ಸಿಲಿಕಾ ಉಸುಕು | 20-11-96 20 ವರ್ಷ | ಕೆಲಭಾಗ್ 10.20 ಎಕರೆ |
| | | | | ಕಾರಾವಾರ ತಾಲ್ಲೂಕು | |
| 15. | ಕಮಲಾ ಎಂ. ಪವಾರ | 1944 | ಲೈಮ್‌ಶೆಲ್ | 25-5-84 20 ವರ್ಷ | ಮಾವಿನಹಳ್ಳ 6.07 ಹೆ. |
| 16. | ನಾಯ್ಕ ಮಿನರಲ್ಸ್ | 2230 | ಲೈಮ್‌ಶೆಲ್ | 3-1-96 20 ವರ್ಷ | ಚಿತ್ತಾಕುಲಾ 101.59 ಹೆ. |
| 17. | ನಾಯ್ಕ್ ಮಿನರಲ್ಸ್ | 2206 | ಲೈಮ್‌ಶೆಲ್ | 10-7-92 20 ವರ್ಷ | ನಂದನಗದ್ದಾ 30 ಎಕರೆ |
| 18. | ದಿ ವೆಸ್ಟ್ ಕೋಸ್ಟ್ ಪೇಪರ್ಸ್ ಮಿಲ್ಸ್ ಲಿಮಿಟೆಡ್ | 2237 | ಲೈಮ್‌ಶೆಲ್ | 14-12-97 20 ವರ್ಷ | ಸುಂಕೇರಿ 151.71 ಹೆ. |
| 19. | ಸಾಗರ ಮಿನರಲ್ಸ್ | 2117 | ಲೈಮ್‌ಶೆಲ್ | 14-3-91 5 ವರ್ಷ | ಕಡವಾಡ 22.5 ಹೆ. |
| 20. | ಕೂಸ್ಟಲ್ ಮಿನರಲ್ಸ್ | 1788 | ಲೈಮ್‌ಶೆಲ್ | 17-10-81 20 ವರ್ಷ | ಸುಂಕೇರಿ 200 ಎಕರೆ |
| 21. | ಶಮೀಮ್ ಎ. ಖಾನ್ | 1946 | ಲೈಮ್‌ಶೆಲ್ | 30-5-84 20 ವರ್ಷ | ಕಡವಾಡ 161.87 ಹೆ. |
| 22. | ಕೋಸ್ಟಲ್ ಮಿನರಲ್ಸ್ | 1341 | ಜಿಪ್ಸೆ | 28-6-76 20 ವರ್ಷ | ಕಡವಾಡ 132.53 ಹೆ. |
| 23. | ವಿನೀತ ಮಿನರಲ್ಸ್ (ವರ್ಗಾವಣೆಗೊಂಡ ಗುತ್ತಿಗೆ) | 2013 | ಸಿಲಿಕಾ ಉಸುಕು | 23-5-86 20 ವರ್ಷ | ಮಾಜಾಳಿ 93.08 ಹೆ. |

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅಧ್ಯಕ್ಷರೆ, ನೀವು ನನ್ನ ರಕ್ಷಣೆಗೆ ಬರಬೇಕು. ದಾರಿಯಲ್ಲಿ ಹೋಗುವ ಮಾರಿಯನ್ನು ನಮ್ಮ ಊರಿಗೆ ತಂದುಕೊಂಡು ಹಾಗಿದೆ. ಏಕೆಂದರೆ, ಉತ್ತರ ಕನ್ನಡ ಜಿಲ್ಲೆಯಲ್ಲಿ ಎಲ್ಲೆಲ್ಲಿ ಗಣಿಗಾರಿಕೆ ನಡೆಯುತ್ತಿದೆ ಎಂದು ಕೇಳಿದರೆ, ನಮ್ಮ ಶಿರಸಿ ತಾಲ್ಲೂಕಿನಲ್ಲಿ ಗಣಿಗಾರಿಕೆ ನಡೆಯುತ್ತಿದೆ ಎಂದು ಉತ್ತರಿಸಿದ್ದಾರೆ. ನಮ್ಮ ಶಿರಸಿ ತಾಲ್ಲೂಕಿನಲ್ಲಿ ಗಣಿಗಾರಿಕೆ ಇಲ್ಲ. ಈ ರೀತಿ ದುರುದ್ದೇಶ ಇಟ್ಟುಕೊಂಡಿರುವ ಹಾಗೆ ಕಾಣಿಸುತ್ತದೆ. ಇದರ ಬಗ್ಗೆ ತಾವು ಸ್ಪಷ್ಟಪಡಿಸಬೇಕು.

ಅಧ್ಯಕ್ಷರು: ಮಿಸ್ಟೇಕಾಗಿದ್ದರೆ ಸರಿಪಡಿಸಿಕೊಳ್ಳಿ.

ಶ್ರೀ ವಿ. ಮುನಿಯಪ್ಪ: ನಾವು ಪೂರ್ಣವಾದ ವಿವರ ಕೊಟ್ಟಿದ್ದೇವೆ. ಯಾರ್ಯಾರು ಲೀಸ್‌ಗೆ ತೆಗೆದುಕೊಂಡಿದ್ದಾರೆ ಅವರ ಪಟ್ಟಿಯನ್ನು ಕೊಟ್ಟಿದ್ದೇವೆ. ಅವರು ಮಾಡಬಹುದು, ಅದಕ್ಕೆ ಲೈಸೆನ್ಸ್ ಇದೆ. ಲೈಸೆನ್ಸ್ ಇಲ್ಲದೆ, ನಾವು ಕೊಡಲು ಸಾಧ್ಯವಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಇದರಲ್ಲೇನೋ ತಪ್ಪಾಗಿದೆ. ತಮ್ಮ ಅಧಿಕಾರಿಗಳು ತಪ್ಪು ಮಾಹಿತಿ ಕೊಟ್ಟಿದ್ದಾರೆ. ನಮ್ಮ ಊರಿನ ಬಗ್ಗೆ ನನಗೆ ಗೊತ್ತಿಲ್ಲವೇ?

ಅಧ್ಯಕ್ಷರು: ಸರಿಪಡಿಸಿಕೊಳ್ಳುತ್ತಾರೆ ಬಿಡಿ.

ಶ್ರೀ ವಿ. ಮುನಿಯಪ್ಪ: ಯಾವುದೇ ಕಾರಣಕ್ಕೂ ತಪ್ಪಾಗಿರಲು ಸಾಧ್ಯವಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ರಾಜ್ಯದಲ್ಲಿ 463 ಗಣಿಗಾರಿಕೆಗಳು ಚಾಲ್ತಿಯಲ್ಲಿವೆ ಎಂದು ಹೇಳಿದ್ದಾರೆ. ಅವರ ಉತ್ತರ ಪ್ರಕಾರ, ಪಶ್ಚಿಮ ಘಟ್ಟ, ಅದು ಉಳಿದರೆ ಇಂದು ನಾಡು ಉಳಿಯುತ್ತೆ, ಇದು ನಿಮಗೂ ಗೊತ್ತು. ಮಳೆ, ಬೆಳೆ, ವಾತಾವರಣ ಚೆನ್ನಾಗಿರುತ್ತದೆ. ಕಾಡು ಇರಬೇಕು. ಅಲ್ಲಿಯೂ ಗಣಿಗಾರಿಕೆ ಮುಂದುವರೆಸಲು ಕಾರಣವೇನು? ಇದುವರೆಗೆ ಯಾವ ಕಾರಣದಿಂದ ಅದನ್ನು ನಿಲ್ಲಿಸಿಲ್ಲ?

ಶ್ರೀ ವಿ. ಮುನಿಯಪ್ಪ: ಪಶ್ಚಿಮ ಘಟ್ಟಗಳಲ್ಲಿ ಯಾವುದೇ ಕಾರಣಕ್ಕೂ ಗಣಿಗಾರಿಕೆಯನ್ನು ನಾವು ಕೊಡುವುದಿಲ್ಲವೆಂದು ಹೊಸ ಗಣಿ ನೀತಿಯ ಪ್ರಕಾರ ತೀರ್ಮಾನಿಸಿದ್ದೇವೆ. ಇತ್ತೀಚೆಗೆ ನಾವು ತೆಗೆದುಕೊಂಡ ನಿರ್ಣಯಗಳಲ್ಲಿ ಪಶ್ಚಿಮ ಘಟ್ಟಗಳಲ್ಲಿ ಹೊಟ್ಟಿಲ್ಲ, ಮುಂದೆ ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ವರ್ಷದಿಂದ ವರ್ಷಕ್ಕೆ ರಾಯಲ್ಟಿ ಹಣ ಕಡಿಮೆಯಾಗುತ್ತಿದೆ, ಇದರಿಂದ ಸರ್ಕಾರಕ್ಕೆ ಬರುತ್ತಿರುವ ಹಣ ಕಡಿಮೆಯಾಗುತ್ತಿದೆ ಎನ್ನುವ ಮಾಹಿತಿ ನಮಗೆ ಬಂದಿದೆ. ಇದರ ಬಗ್ಗೆ ತಾವು ವಿವರಗಳನ್ನು ಕೊಡಬೇಕು. ಗಣಿಗಾರಿಕೆ ರಾಜ್ಯದಲ್ಲಿ ಹೇಗಿರಬೇಕೆಂಬ ಬಗ್ಗೆ ಸದನದ ಜಂಟಿ ಸಮಿತಿ ಒಂದು ವರದಿ ಕೊಟ್ಟಿದ್ದು, ಅದರ ವರದಿಯನ್ನು ಹೇಗೆ ಅನುಷ್ಠಾನಗೊಳಿಸುತ್ತೀರಿ? ಬ್ರಿಡ್ಜ್, ಪೀವಸ್ಥಾನ ರಸ್ತೆಗಳ ಅಕ್ಕಪಕ್ಕದಲ್ಲಿ ದೊಡ್ಡ ಸಿಡಿಮದ್ದನ್ನು ಸ್ಫೋಟಿಸಿ, ಕಲ್ಲು ತೆಗೆಯುವುದು ಇನ್ನೂ ಮುಂದುವರಿದಿದೆ. ಪೂಜಕ ಕ್ಷೇತ್ರದಲ್ಲಿ ಹೇಗೆ ದೊಡ್ಡ ತೊಂದರೆಯಾಯಿತೆಂಬ ಬಗ್ಗೆ ನಮಗೆಲ್ಲಾ ಗೊತ್ತು. ಇನ್ನೂ ಗಣಿಗಾರಿಕೆ ನಡೆಯುವ ಸ್ಥಳಗಳಿವೆ. ಅದನ್ನು ನಿಲ್ಲಿಸಲು ಯಾವ ಕ್ರಮ ತೆಗೆದುಕೊಂಡಿದ್ದೀರಿ? ಕಂದಾಯ, ಅರಣ್ಯ, ಖಾಸಗಿಯವರ ಭೂಮಿಗಳಲ್ಲಿ ಗಣಿಗಾರಿಕೆ ನಡೆಯುತ್ತಿದ್ದು, ಈ 3 ಇಲಾಖೆಗಳಲ್ಲಿ ಪರಸ್ಪರ ಸಂಬಂಧವಿಲ್ಲದ ಸ್ಥಿತಿ ಇದ್ದು. ಲ್ಯಾಂಡ್ ಯಾರಿಗೋ ಇದ್ದು, ಬೇರೆ ಯಾರೋ ಹೆಸರಿನಲ್ಲಿ ಗಣಿಗಾರಿಕೆಯನ್ನು ಮಾಡುವ ಅನೇಕ ಪ್ರಕರಣಗಳಿವೆ. ಇದನ್ನು ತಡೆಯಲು ತಾವೇನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಸಿ. **ಗುರುಸ್ವಾಮಿ**: ರಾಜ್ಯದಲ್ಲಿರುವ ಗಣಿಗಾರಿಕೆಯ ಪಟ್ಟಿ ಮಾಡಿ ಎಂದು ಕೇಳಿದ್ದಾರೆ. ಚಾಮರಾಜನಗರ ಜಿಲ್ಲೆಯಲ್ಲಿ ಬಹಳ ಉತ್ತಮ ಗಣಿಗಾರಿಕೆ ನಡೆಯುತ್ತಿದ್ದರೂ, ಅದನ್ನು ನಿಷ್ಪಿದ್ದಾರೆ. ಇದಕ್ಕೆ ಕಾರಣವೇನು? ಸದನಕ್ಕೆ ಏಕೆ ತಪ್ಪು ಮಾಹಿತಿ ಕೊಟ್ಟಿದ್ದಾರೆ?

ಶ್ರೀ ಎ. **ಮುನಿಯಪ್ಪ**: ಕೊಟ್ಟಿರುವ ಪಟ್ಟಿಯಲ್ಲಿ ಮೇಜರ್ ಮಿನರಲ್ಸ್‌ನ್ನು ಮಾತ್ರ ಮೆನ್‌ಷನ್ ಮಾಡಿದ್ದು, ಮಾನ್ಯ ಸದಸ್ಯರು ಕೇಳಿದ್ದಕ್ಕೆ, ಅವರ ಪ್ರದೇಶಕ್ಕೆ ಸೀಮಿತವಾಗಿ ಮೇಜರ್ ಮಿನರಲ್ಸ್, ಹೆಚ್ಚು ಬರುವುದರಿಂದ, ಅದರ ಬಗ್ಗೆ ವಿವರ ಕೊಟ್ಟಿದ್ದೇವೆ. ಒಟ್ಟು 5,888 ಲೀಸ್ ಇದ್ದು, ಅದರ ಬಗ್ಗೆ ವಿವರ ಕೊಡಬೇಕಾಗುತ್ತದೆ. ಬೇಕಾದರೆ ಜಿಲ್ಲಾವಾರು ಮಾಹಿತಿ ಕಳುಹಿಸಿಕೊಡುತ್ತೇನೆ. ರಾಯಲ್ಟಿ ಬಗ್ಗೆ ಹೇಳುವುದಾದರೆ ಗ್ರಾನೈಟ್‌ಗೆ ಅಂತರರಾಷ್ಟ್ರೀಯ ಮಾರ್ಕೆಟ್ ಬೆಲೆ ಕುಸಿದಿದೆ. ಅದಕ್ಕೆ ಕಾರಣ ಬೇರೆ ಇದೆ. ಆದರೆ, 1991 ರಿಂದ ಹೋಲಿಸಿದರೆ, ನಮ್ಮ ಗುರಿ ಪ್ರಕಾರ, 120 ಕೋಟಿ ರೂಪಾಯಿ ಕಲೆಕ್ಷ್ ಆಗಬೇಕಾಗಿದ್ದು, ಫೆಬ್ರವರಿ 28ಕ್ಕೆ ನಾವು 105 ಕೋಟಿ ರೂಪಾಯಿಗಳನ್ನು ಕಲೆಕ್ಟ್ ಮಾಡಿದ್ದೇವೆ. ಮಾರ್ಚ್ ತಿಂಗಳಿನ ಹಣ ಬರಬೇಕಾಗಿದ್ದು, ಪಿಡಬ್ಲ್ಯೂಡಿ ಇಲಾಖೆ, ಬೇರೆ ಇಲಾಖೆಗಳಿಂದ ವಸೂಲಾಗಿರುವ ರಾಯಲ್ಟಿ ನಮಗೆ ರೀ ಇಂಬರ್ಸ್ ಆಗಬೇಕಾಗಿದೆ. ನಮ್ಮ ಗುರಿಯನ್ನು ನಾವು ನೂರಕ್ಕೆ ನೂರರಷ್ಟು ತಲುಪಿದ್ದೇವೆ. ದೇವಸ್ಥಾನ, ಬ್ರಿಡ್ಜ್, ಸಾರ್ವಜನಿಕರು, ಓಡಾಡುವ ರಸ್ತೆ ಪಕ್ಕದಲ್ಲಿನ ಸ್ಥಳಗಳನ್ನು ಸುರಕ್ಷಿತ ಪ್ರದೇಶಗಳೆಂದು ಘೋಷಿಸಿದ್ದೇವೆ. ಆ ಪ್ರದೇಶದಲ್ಲಿ ನಾವು ಯಾವುದೇ ಕಾರಣಕ್ಕೂ ಗಣಿಗಾರಿಕೆ ಅವಕಾಶ ಕೊಡುವುದಿಲ್ಲ. ಆ ಎಲ್ಲಾ ಪ್ರದೇಶಗಳು ನಿರ್ಬಂಧಿತ ಪ್ರದೇಶಗಳಾಗಿವೆ. ಈಗಾಗಲೇ ಅಲ್ಲಿ ರದ್ದುಗೊಳಿಸಿದ್ದೇವೆ, ಇನ್ನು ಮುಂದೆ ಅಂಥ ಪ್ರಕರಣ ನಮ್ಮ ಗಮನಕ್ಕೆ ಬಂದರೆ ಪುನಃ ಅವುಗಳನ್ನು ನಾವು ರದ್ದು ಮಾಡುತ್ತೇವೆ.

ಶ್ರೀ ಎ.ಆರ್. **ಕೃಷ್ಣಮೂರ್ತಿ**: ಮಾನ್ಯ ಸಚಿವರು ಗಣಿಗಾರಿಕೆ ಎಲ್ಲೆಲ್ಲಿ ನಡೆಯುತ್ತಿವೆ ಎನ್ನುವ ಬಗ್ಗೆ ಏನು ಉತ್ತರ ಕೊಟ್ಟಿದ್ದಾರೆ ಅದರಲ್ಲಿ ನಮ್ಮ ಮಾನ್ಯ ಗುರುಸ್ವಾಮಿಯವರು ಹೇಳಿದ ಹಾಗೆ ನಮ್ಮ ಜಿಲ್ಲೆಯನ್ನು ಕೈಬಿಟ್ಟಿದ್ದಾರೆ. ಕಳೆದ ವಾರವೂ ಕೂಡ ಮಾನ್ಯ ಸಚಿವರು ಸದನದ ಮುಂದೆ ಒಂದು ಅಂಕಿ ಅಂಶಗಳ ಪಟ್ಟಿಯನ್ನು ಇಟ್ಟರು. ಮೈಸೂರು ಮಿನರಲ್ಸ್‌ಗೆ ಸಂಬಂಧಿಸಿದಂತೆ ಇಂಥಿಂಥ ವ್ಯಾಪ್ತಿಯಲ್ಲಿ ಗಣಿಗಾರಿಕೆ ನಡೆಯುತ್ತಿದೆ, ಇಂಥಿಂಥ ವ್ಯಾಪ್ತಿಯಲ್ಲಿ ರದ್ದು ಮಾಡಿದ್ದೇವೆನ್ನುವ, ಪಟ್ಟಿಯನ್ನು ಇಟ್ಟರು. ಕಳೆದ ವಾರ ಲಾಭದಾಯಕವಲ್ಲದ ಗಣಿಗಳನ್ನು ಮುಚ್ಚಿದ್ದೇವೆಂದು ತಾವು ಏನು ಹೇಳಿದಿರಿ, ಆ ಗಣಿಯಲ್ಲಿ ನಮ್ಮ ಮೈಸೂರು ಮಿನರಲ್ಸ್ ಅಧಿಕಾರಿಗಳು ಕಲ್ಲನ್ನು ಸಾಗಣೆ ಮಾಡಿದ ಸಂದರ್ಭದಲ್ಲಿ, ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಧರಣಿ ಕುಳಿತ ಗಣಿಗಾರಿಕೆಯ ಕಾರ್ಮಿಕರು ಹೋಗಿ ತಡೆದು, ಆ ಕಲ್ಲುಗಳನ್ನು ಅವರ ವಶಕ್ಕೆ ತೆಗೆದುಕೊಂಡು ಅದನ್ನು ಪೊಲೀಸ್‌ನವರಿಗೆ ಒಪ್ಪಿಸಿದ್ದಾರೆ. ಕಾನೂನು ಬಾಹಿರವಾಗಿ ನಡೆದಿರುವ ಬಗ್ಗೆ ಮಾನ್ಯ ಸಚಿವರು ಕಠಿಣ ಕ್ರಮ ತೆಗೆದುಕೊಳ್ಳಬೇಕು ಹಾಗೂ ಈ ಗಣಿ ಕಾರ್ಮಿಕರ ವಿಚಾರದಲ್ಲಿ ಒಂದು ನಿರ್ಣಯ ತೆಗೆದುಕೊಳ್ಳುತ್ತೇನೆಂದು ಹೇಳಿ, ಇದುವರೆವಿಗೂ ತೆಗೆದುಕೊಂಡಿಲ್ಲ, ಅವರು ಸುಮಾರು ನೂರಕ್ಕೂ ಹೆಚ್ಚು ದಿನ ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಮುಷ್ಕರ ಮಾಡಿದ್ದಾರೆ, ಈ ಹಂತದಲ್ಲಿ ಸರ್ಕಾರ ಮಧ್ಯೆ ಪ್ರವೇಶಿಸಿ ಇದನ್ನು ಬಗೆಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ವಿ. ಮುನಿಯಪ್ಪ:** ನಾನು ಈಗಾಗಲೇ ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆ. ಆ ಎಂಎಂಎಲ್ ಪರಿಸ್ಥಿತಿಯ ಬಗ್ಗೆ ಅಂಕಿಅಂಶಗಳ ಸಮೇತವಾಗಿ ವರದಿಯನ್ನು ಕೊಟ್ಟಿದ್ದೇನೆ. ಈಗಿರುವ ಪರಿಸ್ಥಿತಿಯಲ್ಲಿ ತತ್ಕಾಲಿಕವಾಗಿ ಅಲ್ಲಿ ಗಣಿಗಾರಿಕೆ ಮಾಡುವುದು ಸಾಧ್ಯವಿಲ್ಲ. ಕಳೆದ 13 ವರ್ಷಗಳಿಂದ ನಷ್ಟ ಅನುಭವಿಸುತ್ತಿದೆ, ಬೇರೆ ಕಡೆ ಲಾಭದಾಯಕವಾಗಿ ನಡೆಯುವ ಗಣಿಗಾರಿಕೆಯ ಕಾರ್ಮಿಕರಿಗೂ ಕೂಡ ತೊಂದರೆಯಾಗುವ ಪರಿಸ್ಥಿತಿ ತಲುಪಿದೆ. ಆದ್ದರಿಂದ, ಅದನ್ನು ತಾತ್ಕಾಲಿಕವಾಗಿ ಅನಿವಾರ್ಯವಾಗಿ ನಿಲ್ಲಿಸಬೇಕಾಗಿದೆ. ಅದಕ್ಕೆ ಪರ್ಯಾಯವಾಗಿ ಹತ್ತಿರದಲ್ಲಿಯೇ ಅವರನ್ನು ವರ್ಗಾವಣೆ ಮಾಡಿಕೊಡುವುದಕ್ಕೆ ಅವಕಾಶ ಮಾಡಿದ್ದೇವೆ. ಮುಂದೆ ಅದು ಲಾಭದಾಯಕವಾಗಿ ನಡೆಯುವ ವಾತಾವರಣ ಸೃಷ್ಟಿ ಆದರೆ ಪುನರ್ ಪ್ರಾರಂಭಿಸುವ ಸಾಧ್ಯತೆ ಕೂಡ ಇದೆ.

**ಶ್ರೀ ಎ.ಆರ್. ಕೃಷ್ಣಮೂರ್ತಿ:** ನಿಲ್ಲಿಸಿರುವ ಗಣಿಗಳಲ್ಲಿ ಬೇಕಾದಷ್ಟು ಕಲ್ಲುಗಳ ಸಂಗ್ರಹಣೆ ಇದ್ದು, ಇದನ್ನು ಸರ್ಕಾರಿ ಲೆಕ್ಕ ಶೀರ್ಷಿಕೆಯಲ್ಲಿ ತೆಗೆದುಕೊಳ್ಳದೆ ಹಾಗೆಯೇ ಬಿಟ್ಟರೆ ಕಳ್ಳರು ಅದನ್ನು ಬೇರೆ ಕಡೆಗೆ ಸಾಗಾಣಿಕೆ ಮಾಡುವ ಸಾಧ್ಯತೆ ಇದೆ. ಸುಮಾರು 100 ಕ್ಕೂ ಹೆಚ್ಚು ಮೀಟರ್ ಕಲ್ಲು ಅಲ್ಲಿರುವುದರಿಂದ ಗಣಿ ಕಾರ್ಮಿಕರು ಅಲ್ಲಿ ಕಾಯುತ್ತಿದ್ದಾರೆ. ಅದರಲ್ಲಿರುವ ಕಲ್ಲುಗಳನ್ನು ಸಾಗಾಣಿ ಮಾಡುವಲ್ಲಿ ಕೆಲವು ಅಧಿಕಾರಿಗಳು ಷಾಮೀಲಾಗಿದ್ದಾರೆಂದು ಮೊನ್ನೆ ಪತ್ರಿಕೆಗಳಲ್ಲಿ ಕೂಡ ಬಂದಿತ್ತು. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆಂದು ತಾವು ತಿಳಿಸಬೇಕು.

**ಶ್ರೀ ವಿ. ಮುನಿಯಪ್ಪ:** ಅಲ್ಲಿರುವ ದಾಸ್ತಾನು ಏನು ಇದೆ ಅದರ ಬಗ್ಗೆ ಸಂಬಂಧಿಸಿದ ಅಧಿಕಾರಿಗಳಿಗೆ ತಕ್ಷಣ ಸೂಚನೆ ಕೊಟ್ಟು ಆ ದಾಸ್ತಾನನ್ನು ವಿಲೇ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

**ಶ್ರೀ ಎಶ್ವೇಶ್ವರ ಹೆಗಡೆ ಕಾಗೇರಿ:** ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕು ಬಿಸಗೋಡಿನಲ್ಲಿ ಗಣಿಗಾರಿಕೆ ನಡೆಯುತ್ತಿದ್ದು ಈಗ ಅದನ್ನು ನಿಲ್ಲಿಸಲಾಗಿದೆ. ಇವರು ಅಲ್ಲಿ ಗಣಿಗಾರಿಕ ಮುಗಿದ ನಂತರ ಸಂಪೂರ್ಣವಾಗಿ ಮಣ್ಣು ತುಂಬಿ ಅರಣ್ಯ ಇಲಾಖೆಯಿಂದ ಸಸಿ ನೆಡುವಂಥ ಕೆಲಸ ಮಾಡದಿರುವುದರಿಂದ, ಕಾಳಿ ಕಣಿವೆಯಲ್ಲಿ ಕದ್ರಾ, ಕೋಡಸಹಳ್ಳಿ ಡ್ಯಾಂಗಳು ಈಗ ಏನು ವಿದ್ಯುತ್ ಉತ್ಪಾದನೆ ಮಾಡುತ್ತವೆಯೋ, ಅಲ್ಲಿ ಗಣಿಗಾರಿಕೆ ಸ್ಥಳದಿಂದ ಮಣ್ಣು ಕೊಚ್ಚಿ ಹೋಗುತ್ತಿದೆ. ಇದರಿಂದಾಗಿ ಆ ಡ್ಯಾಂ ನಲ್ಲಿ ಹೂಳು ತುಂಬುತ್ತಿದೆ, ಆದ್ದರಿಂದ ಸಂಬಂಧಪಟ್ಟ ಇಲಾಖೆಯವರೊಡನೆ ಮಾತನಾಡಿ ಅಲ್ಲಿ ಸರಿಯಾಗಿ ಮಣ್ಣು ಕೊಚ್ಚಿ ಹೋಗದ ರೀತಿಯಲ್ಲಿ ತಾವು ಪ್ರಯತ್ನಿಸದೇ ಹೋದರೆ ಕಾಳಿ ಕಣಿವೆಯಲ್ಲಿರುವ ಈ ಎರಡು ದೊಡ್ಡ ಡ್ಯಾಂಗಳಲ್ಲಿ ಹೂಳು ತುಂಬಿ ಅದನ್ನು ಎತ್ತುವಂಥ ದೊಡ್ಡ ವಿಷಮ ಸ್ಥಿತಿ ಬರುತ್ತದೆ. ಅದರ ಬಗ್ಗೆ ಸರ್ಕಾರ ತನ್ನ ನಿಲುವನ್ನು ಹೇಳಬೇಕು.

**ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ:** ರೇಸ್‌ಕೋರ್ಸ್ ರಸ್ತೆಯಲ್ಲಿರುವ ಖನಿಜ ಭವನದಲ್ಲಿ ಬಹಳ ಕಡಿಮೆ ರೇಟ್‌ನಲ್ಲಿ ಬಾಡಿಗೆ ಕೊಟ್ಟಿರುತ್ತಾರೆ. ಮಾನ್ಯ ಸಚಿವರು ಅದರ ಬಗ್ಗೆ ಉತ್ತರ ಹೇಳಬೇಕಾಗುತ್ತದೆ.

ಅಧ್ಯಕ್ಷರು: ಅದಕ್ಕೂ ಇದಕ್ಕೂ ಏನು ಸಂಬಂಧವಿದೆ? ಈಗಾಗಲೇ ಸಾಕಷ್ಟು ಸಮಯವಾಗಿರುವುದರಿಂದ ಹೆಗಡೆಯವರ ಪ್ರಶ್ನೆಗೆ ಸಚಿವರೇ ತಾವು ಉತ್ತರ ಹೇಳಿ.

ಶ್ರೀ ವಿ. ಮುನಿಯಪ್ಪ: 1997ಕ್ಕೆ ಬಿಸ್‌ಗೋಡ್ ಗಣಿಗಾರಿಕೆಯನ್ನು ತಾವು ನಿಲ್ಲಿಸಿದ್ದು ಇದನ್ನು ಯಾವುದೇ ಕಾರಣಕ್ಕೂ ಮುಂದುವರಿಸುವುದಿಲ್ಲ. ಅದು ಪಶ್ಚಿಮಘಟ್ಟದ ವ್ಯಾಪ್ತಿಯಲ್ಲಿ ಬರುವುದರಿಂದ ಮುಂದೆ ಗಣಿಗಾರಿಕೆ ಮಾಡತಕ್ಕಂಥ ಅವಕಾಶವಿಲ್ಲ. ಮಳೆ ಬಂದಾಗ ನೀರು ಹರಿದು ಮಣ್ಣು ಕೊಚ್ಚಿಕೊಂಡು ಹೋಗುತ್ತದೆಂದು ತಾವು ಏನು ಹೇಳಿದಿರಿ ಇದು ಅರಣ್ಯ ಇಲಾಖೆಯ ವ್ಯಾಪ್ತಿಯಲ್ಲಿ ಬರುವುದರಿಂದ, ತಾವು ಕೊಟ್ಟ ಸಲಹೆಯನ್ನು ಅರಣ್ಯ ಇಲಾಖೆಗೆ ಕಳುಹಿಸಿಕೊಡುತ್ತೇನೆ.

ಶ್ರೀ ಹೆಚ್. ಶಂಕರಲಿಂಗೇಗೌಡ: ಖನಿಜ ಭವನದಲ್ಲಿ ಬಹಳ ಕಡಿಮೆ ರೇಟ್‌ಗೆ ಬಾಡಿಗೆ ಕೊಟ್ಟಿದ್ದಾರೆಂದು ಜನ ಹೇಳುತ್ತಿದ್ದಾರೆ. ಇದಕ್ಕೆ ನೀವು ಉತ್ತರ ಕೊಡಬೇಕಾಗುತ್ತದೆ.

ಅಧ್ಯಕ್ಷರು: ಅವರು ಕೇಳಿರುವ ಪ್ರಶ್ನೆಗೂ ನಿಮ್ಮ ಪ್ರಶ್ನೆಗೂ ಸಂಬಂಧವಿಲ್ಲವಾದ್ದರಿಂದ ಅವರು ಉತ್ತರಿಸುವುದಿಲ್ಲ, ತಾವು ಬೇಕಾದರೆ ಬೇರೆ ಪ್ರಶ್ನೆ ತನ್ನಿ, ಆಗ ಅವರು ಉತ್ತರಿಸುತ್ತಾರೆ.

(ಗೊಂದಲ)

Mr. Speaker: The Minister need not answer that question.

ಬೆಲೆ ಕುಸಿತದಿಂದ ಹಾನಿಗೊಳಗಾದ ರೈತರಿಗೆ ಆವರ್ತ ನಿಧಿಯಿಂದ ಹಣ ಬಿಡುಗಡೆ

50(612) ಶ್ರೀ ರವೀಂದ್ರನಾಥ್ ಎಸ್.ಎ. (ಮಾಯಕೊಂಡ): ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಲೆ ಕುಸಿತದಿಂದ ಹಾನಿಗೊಳಗಾದ ರೈತರ ನೆರವಿನ ಸರ್ಕಾರ ಎಷ್ಟು ಕೋಟಿ ರೂ.ಗಳ ಆವರ್ತ ನಿಧಿಯನ್ನು ಎಂದಿನಿಂದ ಸ್ಥಾಪಿಸಿತು;

ಆ) ಆವರ್ತ ನಿಧಿ ಹಣವನ್ನು ಯಾವ ಯಾವ ಮೂಲಗಳಿಂದ ಸಂಗ್ರಹಿಸಲಾಗಿದೆ; (ಜಿಲ್ಲಾವಾರು ವಿವರ)

ಇ) ಸದರಿ ಹಣದಿಂದ ಒಟ್ಟು ಎಷ್ಟು ಜನ ರೈತರಿಗೆ ಇದುವರೆಗೆ ಹಣ ಬಿಡುಗಡೆ ಮಾಡಲಾಗಿದೆ. ತಾಲ್ಲೂಕುವಾರು ಮಾಹಿತಿ ನೀಡುವುದು?

ಶ್ರೀ ಆರ್.ಬಿ. ತಿಮ್ಮಾಪೂರ್ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು):

ಅ) ಸರ್ಕಾರ ಆದೇಶ ಸಂಖ್ಯೆ: ಸಿಎಂಡಬ್ಲ್ಯೂ: 239: ಎಂಆರ್‌ಇ: 97, ದಿನಾಂಕ: 24-11-1999 ರಲ್ಲಿ ಸದರಿ ನಿಧಿಗೆ ರೂ. 15.00 ಕೋಟಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಂದ ಮತ್ತು ರೂ. 5.00 ಕೋಟಿ ಕರ್ನಾಟಕ ಸರ್ಕಾರದಿಂದ ನೀಡಲು ಆದೇಶಿಸಲಾಗಿತ್ತು. ನಂತರ ಸದರಿ ಸರ್ಕಾರಿ ಆದೇಶವನ್ನು ಮಾರ್ಪಾಡು ಮಾಡಿ ಪರಿಷ್ಕೃತ ಆದೇಶ ಸಂಖ್ಯೆ: ಸಿಎಂಡಬ್ಲ್ಯೂ: 369: ಎಂಆರ್‌ಇ: 2000, ದಿನಾಂಕ: 03-01-2001 ರಲ್ಲಿ ಆವರ್ತ ನಿಧಿಯನ್ನು ರೂ. 75.00